# ವಿದೇಶಿ ಮಹಿಳೆ ಜೊತೆಗೆ ಮದುವೆ!



**ದೀಪಕ್ ಬಿ.ಆರ್.**

ಸ್ಟಾರ್ ಸುವರ್ಣದ 'ಬಿಳೀಹೆಂಡ್ತಿ'ಯ ಶಾಗ್ಲಿ

★ *ಕರಿ ಹೆಂಡತಿ ಯಾಕೆ ಆಗಬಾರದಿತ್ತು?*

ಕರಿ ಹುಡುಗಿ ಬೇಕೆಂದರೂ ಅಲ್ಲಿ ಸಿಗಬೇಕಲ್ಲ. ಅಲ್ಲಿ ಎಲ್ಲರೂ ಬಿಳಿಯರೆ. ಉನ್ನತ ಶಿಕ್ಷಣಕ್ಕೆಂದು ಪೋಲೆಂಡಿಗೆ ಹೋಗಿದ್ದೆ. ಅಲ್ಲಿಯೇ ಒಬ್ಬ ಹುಡುಗಿಯನ್ನು ಪ್ರೀತಿಸಿ ಮರಳಿ ಮನೆಗೆ ಬರುವ ಹೊತ್ತಿಗೆ ಮದುವೆಯಾಗಿ ಬಂದಿದ್ದೇನೆ. ಸಂಪ್ರದಾಯಸ್ಥ ಕುಟುಂಬ ನಮ್ಮದು. ನಮ್ಮ ಮನೆಗೆ ಅದು ಆಗಿ ಬರುವುದಿಲ್ಲ. ವಾಸ್ತವದಲ್ಲಿ ನಮ್ಮ ಪೋಷಕರು ದೊಡ್ಡ ಕನಸನ್ನೇ ನನ್ನ ಮೇಲೆ ಕಟ್ಟಿಕೊಂಡಿರುತ್ತಾರೆ. ಆದರೆ ನಾನು ಅವರ ನಂಬಿಕೆಯನ್ನು ಸುಳ್ಳಾಗಿಸಿದ್ದೇನೆ ಎಂದೇ ಅವರು ಭಾವಿಸಿದ್ದಾರೆ. ಶೀರ್ಷಿಕೆ ಹಳೆಯ ಸಿನಿಮಾದ್ದು, ಕಥೆ ಸೊಗಸಾಗಿದೆ. ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ.

★ *ನಟನೆಯ ಗೀಳು ನಿಮ್ಮಲ್ಲಿ ಬೆಳೆದಿದ್ದು ಹೇಗೆ?*

ಶಾಲಾ ದಿನಗಳಲ್ಲಿಯೇ ನನಗೆ ನಟನೆಯ ಗೀಳಿತ್ತು. ಪದವಿ ಓದುವಷ್ಟರಲ್ಲಿ ಉದ್ಯೋಗದ ಬಗ್ಗೆ ಯೋಚಿಸುತ್ತಿದ್ದೆ. ಅದಕ್ಕಾಗಿ ಬೆಂಗಳೂರಿಗೆ ಬಂದೆ. ಕೆಲಸದ ಹುಟುಕಾಟದಲ್ಲಿ ಇದ್ದ ನನಗೆ ಸ್ನೇಹಿತರು ಸಿನಿಮಾದಲ್ಲಿ ನಟನೆಗೆ ಅವಕಾಶ ಇವೆ ಪ್ರಯತ್ನಿಸು ಎಂದು ಹೇಳಿದರು. ಅವರ ಒತ್ತಾಯಕ್ಕೆ ಮಣಿದು ನಟನೆಯತ್ತ ಒಲವು ಹರಿಸಿದೆ. ಅದಕ್ಕೆ ಆರಂಭದಲ್ಲಿ ಒಂದಿಷ್ಟು ಪೂರ್ವ ತಯಾರಿ ಇರಬೇಕು ಎಂದು 'ರೂಪಾಂತರ' ತಂಡವನ್ನು ಸೇರಿದೆ. 'ರಾಮಧಾನ್ಯ' 'ಮುಸ್ಸಂಜೆಯ ಕಥಾ ಪ್ರಸಂಗ'ದ ಹಲವು ಪ್ರದರ್ಶನಗಳನ್ನು ನೀಡಿದೆವು. ಅಷ್ಟರಲ್ಲಿ ನನಗೆ 'ಗಾಂಧಾರಿ' ಧಾರಾವಾಹಿಯಲ್ಲಿ ಅವಕಾಶ ಸಿಕ್ಕಿತು. ಮುಗಿಯುವಷ್ಟರಲ್ಲಿ 'ಬ್ಲ್ಯಾಕ್ ಅಂಡ್ ವೈಟ್' ಎಂಬ ಸಿನಿಮಾದಲ್ಲಿ ನಟಿಸಲು ಸಿದ್ಧನಾದೆ. ಕಾರಣಾಂತರದಿಂದ ಚಿತ್ರೀಕರಣ ಆರು ತಿಂಗಳು ಮುಂದಕ್ಕೆ ಹೋಯಿತು. ಆ ಸಂದರ್ಭದಲ್ಲಿ 'ಬಿಳಿ ಹೆಂಡ್ತಿ'ಯ ನಾಯಕ ನಟನಾಗುವ ಅವಕಾಶ ಸಿಕ್ಕಿದೆ. ಒಟ್ಟಾರೆ ನಾನು ನಟನೆಯನ್ನು ವೃತ್ತಿಯನ್ನಾಗಿ ತೆಗೆದುಕೊಳ್ಳುವ ಬಗ್ಗೆ ಯಾವ ಯೋಚನೆಯೂ ಇರಲಿಲ್ಲ. ಆಕಸ್ಮಿಕವಾಗಿ ರಂಗ ಪ್ರವೇಶ ಮಾಡಿದ್ದೇನೆ. ಅಭಿನಯವನ್ನು ವೃತ್ತಿಯಾಗಿ ತೆಗೆದುಕೊಳ್ಳಬೇಕು ಎಂದೂ ಊಹಿಸಿರಲಿಲ್ಲ.

★ *ನಾಯಕಿ ಮತ್ತು ತಂಡದ ಬಗ್ಗೆ ಹೇಳುವುದಾದರೆ?*

ಸ್ವಭಾವತಃ ಆಕೆ ಒಳ್ಳೆಯ ಹುಡುಗಿ, ಬೋಲ್ಡಾಗಿದ್ದಾರೆ. ಯೂರೋಪಿನ ಹುಡುಗಿ ಹೇಗೆ ಕನ್ನಡ ಧಾರಾವಾಹಿಗೆ ಸರಿಯಾಗುತ್ತಾರೆ ಎಂದೇ ನಾನೂ ಯೋಚಿಸಿದ್ದೆ. ತುಂಬಾ ಚೆನ್ನಾಗಿ ಡೈಲಾಗ್ ಹೇಳುತ್ತಾರೆ. ಅವರು ಈ ಮೊದಲು ಮಾಡೆಲಿಂಗ್ ಮಾಡ್ತಾ ಇದ್ರು. ಹಾಗಾಗಿ ಅವರಿಗೆ ಜಟಿಲ ಅನ್ನಿಸಿಲ್ಲ. ಹೇಳಿಕೊಟ್ಟಂತೆ ತುಂಬಾ ನೀಟಾಗಿ ಮಾಡುತ್ತಾರೆ. ಅನಿಲ್‌ಕುಮಾರ್ ನಿರ್ದೇಶನ ಮಾಡುತ್ತಿದ್ದಾರೆ. ತಂಡ ಕೂಡ ತುಂಬಾ ಚೆನ್ನಾಗಿದೆ. ಕಥೆ ಕೂಡ ಭಿನ್ನವಾಗಿದೆ. ಸಿನಿಮಾ ಮಾದರಿಯಲ್ಲಿ ಚಿತ್ರೀಕರಣ ಮಾಡುತ್ತಿದ್ದಾರೆ.

★ *ಸಾಮಾನ್ಯನೊಬ್ಬ ಸೆಲೆಬ್ರಿಟಿ ಆದಾಗ...*

ಎಂದೆಂದೂ ನಾನು ಸಾಮಾನ್ಯನೇ. ನನಗೆ ಯಾವತ್ತೂ ಸೆಲೆಬ್ರಿಟಿ ಅಂತ ಅನ್ನಿಸಿಲ್ಲ. ನನ್ನ ಗೆಳೆಯರೇ ಆರೀತಿ ಭ್ರಮಿಸಿದ್ದಾರೆ. ಅವರು ಸಾಮಾನ್ಯ ಹೋಟೆಲ್, ಸಿನಿಮಾ ಮಂದಿರಕ್ಕೆ ಹೋಗುವುದನ್ನು ಪ್ರಶ್ನಿಸುತ್ತಾರೆ. ನನಗೆ ಅದರಲ್ಲಿ ಏನೂ ಭಿನ್ನತೆ ಅನ್ನಿಸುವುದಿಲ್ಲ. ಹಾಗೆ ಹೋಗುವುದರಿಂದ ಅಪರಿಚಿತರು ಎನ್ನಿಸುವ ನಾಲ್ಕಾರು ಮಂದಿ ಮಾತನಾಡಿಸುತ್ತಾರೆ. ಅದರಿಂದ ಯಾವ ತೊಂದರೆಯೂ ಇಲ್ಲ. ನಮ್ಮನ್ನು ಬೆಳೆಸಿದ ಜನರಿಗೆ ನಮ್ಮ ಬಗ್ಗೆ ಅಭಿಮಾನ ಇರುತ್ತದೆ. ಅದಕ್ಕೆ ಅವರು ನಮ್ಮ ಜೊತೆ ಕ್ಷಣ ಮಾತನಾಡಿಸುತ್ತಾರೆ. ಕೈ ಕುಲುಕಿ ಖುಷಿ ಪಡುತ್ತಾರೆ. ಹೆಚ್ಚೆಂದರೆ ಒಂದು ಸೆಲ್ಫಿ ತೆಗೆದುಕೊಳ್ಳುತ್ತಾರೆ. ನಮ್ಮನ್ನು ಬೆಳೆಸಿದ ಅವರ ಜೊತೆ ಒಂದಿಷ್ಟು ಬೆರೆಯುವುದು ಕೃತಜ್ಞತೆಯನ್ನು ಅರ್ಪಿಸಿದಂತೆ.

★ *ನಿಮ್ಮನ್ನು ಬೆಳೆಸುವ ಸಮಾಜದ ಮೇಲೆ ನಿಮ್ಮ ಜವಾಬ್ದಾರಿ ಏನು?*

ಯಾವತ್ತೂ ನಾನು ಕಷ್ಟದಲ್ಲಿ ಇದ್ದವರನ್ನು ಕಂಡಾಗ ಮರುಗುತ್ತೇನೆ. ನನ್ನಿಂದ ಆಗುವ ಸಹಾಯವನ್ನು ಮಾಡುತ್ತೇನೆ. ಸಮುದಾಯದ ನಡುವೆ ಬದುಕುವ ನನಗೆ ನಾನೊಬ್ಬನೇ ನೆಮ್ಮದಿಯಿಂದಿದ್ದರೆ ಯಾವ ಸಂತೋಷವೂ ಇರುವುದಿಲ್ಲ. ನಮ್ಮ ಜೊತೆಗಿದ್ದವರೆಲ್ಲಾ ಸಂತೋಷದಿಂದ ಇದ್ದಾಗ ಬದುಕು ಮತ್ತಷ್ಟು ಸಂಭ್ರಮಗೊಳ್ಳುತ್ತದೆ. ನನಗೆ ಗೊತ್ತಿರುವವರು ಸಂಕಷ್ಟದಲ್ಲಿದ್ದರೆ ಸ್ಪಂದಿಸುತ್ತೇನೆ. ಆರ್ಥಿಕವಾಗಿಯೂ ಸಹಾಯ ಮಾಡುತ್ತೇನೆ. ಅದನ್ನು ಹೇಳಲು ಇಷ್ಟಪಡುವುದಿಲ್ಲ. ಹೊಸದಾಗಿ ಬಣ್ಣದ ಲೋಕಕ್ಕೆ ಪ್ರವೇಶಿಸುವ ಸ್ನೇಹಿತರಿಗೆ ಸಾಧ್ಯವಾದ ಮಟ್ಟಿಗೆ ನಾನು ಪ್ರೋತ್ಸಾಹಿಸುತ್ತೇನೆ.

★ *ಅನಿಶ್ಚಿತ ವೃತ್ತಿಯನ್ನು ಆಯ್ಕೆ ಮಾಡಿಕೊಂಡೆ ಅಂತ ಅನ್ನಿಸಿದೆಯಾ?*

ಇದೊಂದು ಪ್ರಯೋಗ ಎಂದೇ ಬಂದಿದ್ದೇನೆ. ನಾಲ್ಕು ವರ್ಷ ಮಿತಿಯನ್ನು ಹಾಕಿಕೊಂಡಿದ್ದೇನೆ. ಬದುಕೇ ಅನಿಶ್ಚಿತ, ಎಲ್ಲಾ ವೃತ್ತಿಗಳೂ ಕೂಡ ಹಾಗೆಯೇ ಇರುತ್ತವೆ. ನಮ್ಮ ಕ್ಷೇತ್ರದಲ್ಲಿ ಅದು ಹೆಚ್ಚಿರಬಹುದು. ಆ ವಾಸ್ತವದ ಅರಿವು ಇದೆ. ಉದ್ದೇಶಿತ ನಾಲ್ಕು ವರ್ಷದ ಅವಧಿಯಲ್ಲಿ ಏನು ಮಾಡಲು ಸಾಧ್ಯವೋ ಅದೆಲ್ಲಾ ಮಾಡುತ್ತೇನೆ. ಇಲ್ಲಿ ಉಳಿಯುವುದು ಕಷ್ಟ ಅನ್ನಿಸಿದರೆ ಬೇರೆ ಯಾವುದಾದರೂ ಉದ್ಯಮವನ್ನು ಆರಂಭಿಸುವ ಬಗ್ಗೆ ಯೋಚನೆಯನ್ನು ಮಾಡಿಕೊಂಡಿದ್ದೇನೆ.

■ ರಾಘವೇಂದ್ರ